ಹಿಂದೆ ಅಪ್ಪನ ಆತ್ಮಚರಿತ್ರೆ ಹಸ್ತಪ್ರತಿ ಕಡೆ ಕಣ್ಣು ಬಿತ್ತು. 'ಅಯ್ಯೋ ಅಪ್ಪನ ಮಾತು ನಡೆಸಿಕೊಡಬೇಕು' ಎಂದು ಹೊರತೆಗೆದಳು. ಗೆರೆಯುಳ್ಳ ಉದ್ದನೆಯ ಹಾಳೆಗಳಲ್ಲಿ ಚಂದನೆಯ ಅಕ್ಷರದಲ್ಲಿ ಸುಮಾರು ನಾಲ್ಕು ನೂರು ಪುಟ ಬರೆದಿದ್ದರು. ಅಪ್ಪನ ಕನ್ನಡ ಅಕ್ಷರಗಳನ್ನು ವೇದವತಿ ಪ್ರಾಥಮಿಕ ಶಾಲೆಯಿಂದಲೇ ನೋಡಿ ನಿಬ್ಬೆರಗಾಗಿದ್ದಳು. ಅದರಂತೆ ತನ್ನ ಅಕ್ಷರಗಳು ಆಗಲೆಂದು ಪ್ರಯತ್ನಿಸಿ ಸೋತಿದ್ದಳು. ಬೋರ್ಡ್ ಮೇಲೆ ಪಾಠ ಮಾಡುವಾಗ ಬರೆದ ಅಕ್ಷರಗಳನ್ನು ಕಂಡು ವಿದ್ಯಾರ್ಥಿಗಳು ಬೆರಗಾಗಿ ನೋಡುತ್ತ, ಮೊಬೈಲ್‌ನಲ್ಲಿ ಫೋಟೊ ತಗೊತಿದ್ದರಂತೆ.

ವೇದವತಿಗೆ ಅಪ್ಪನ ಆತ್ಮಚರಿತ್ರೆಯನ್ನು ಒಮ್ಮೆ ಓದಿಯೇ ಅಚ್ಚಿಗೆ ಕೊಡಬೇಕನ್ನಿಸಿತ್ತು. ಅನುಮಾನಗಳಿಂದ ಹಾಗನ್ನಿಸಿರಲಿಲ್ಲ. ಏನನ್ನು, ಹೇಗೆ ಬರೆದಿರುವರು ಎಂಬ ಕುತೂಹಲವೇ ಕಾರಣವಾಗಿತ್ತು. ಕಾಲೇಜ್ ಡ್ಯೂಟಿಗೆ ಹೋಗುವ ಮುನ್ನ ಬೆಳಗಿನ ಹೊತ್ತು, ಕಾಲೇಜಿನಿಂದ ಬಂದು ಹೊತ್ತು ಮುಳುಗುವ ಹೊತ್ತಿನಲ್ಲಿ ಓದುತ್ತಿದ್ದಂತೆ ಏನೋ ಒಂದು ಥರ ಭಯ, ಸಂಕಟವಾಗತೊಡಗಿತು. ಒಂದು ತಿಂಗಳು ಓದಿದರೂ ಮುಗಿಯಲಿಲ್ಲ. ಮತ್ತೊಂದು ತಿಂಗಳು ಮುಗಿಯುತ್ತಿದ್ದಂತೆ ಓದು ಮುಗಿಯಿತು. ಕೆಲವು ಭಾಗಗಳನ್ನು ಗುರುತು ಮಾಡಿಕೊಂಡಿದ್ದಳು. ಅವುಗಳನ್ನು ಮತ್ತೆ ಮತ್ತೆ ಓದಿದಳು. ಅಪ್ಪನ ನಿಷ್ಠುರತೆ ಒಡೆದು ಕಾಣುತ್ತಿತ್ತು. ಔದಾರ್ಯವೂ ಕಾಣುತ್ತಿತ್ತು. ಜ್ಯೂನಿಯರ್ ಕಾಲೇಜಿನಲ್ಲಿ ಅಪ್ಪ ಪ್ರಿನ್ಸಿಪಾಲ್ ಆಗಿದ್ದ ವರ್ಷಗಳಲ್ಲಿ ಕೆಲ್ಸಗಳನ್ನು ಹೇಗೆ ನಿಭಾಯಿಸಿದ್ದರು ಎಂಬುವುದನ್ನು ಬರೆದದ್ದರಲ್ಲಿ ತಮಾಷೆಗಳೂ, ಜಗಳಗಳೂ, ವ್ಯಕ್ತಿನಿಂದೆಗಳೂ, ಅನ್ಯರ ಲೈಂಗಿಕ ಹಗರಣಗಳನ್ನು ತಹಬಂದಿಗೆ ತಂದ ವಿಷಯಗಳಿದ್ದವು. ಕೆಲವನ್ನು ತೆಗೆಯಬೇಕು ಎಂದು ವೇದವತಿ ನಿರ್ಧರಿಸಿದ್ದಳು. ಹಾಗೆ ಬಿಡುವ-ತೆಗೆದು ಹಾಕುವ ಗೊಂದಲದಲ್ಲಿ ಮುಳುಗಿದಳು. ತಟ್ಟನೆ ನೆನಪಾದದ್ದು ಅಪ್ಪನ ವಿದ್ಯಾರ್ಥಿ ಗುರುರಾಜ. ಸಾಹಿತ್ಯ ಬಲ್ಲವನು. ಅವನನ್ನು ಕರೆಸಿ ಚರ್ಚಿಸಿದಳು. 'ಹಿರಿಯರು ಬರ್ದಾರ. ನಾನು ಓದಿದರೆ ಏನನ್ನಾದರೂ ಹೇಳಬಹುದು, ಮೇಡಮ್' ಎಂದು ಹೇಳುತ್ತ 'ತೆಗೆದು ಹಾಕುವುದು ಉಚಿತವಲ್ಲ ಮೇಡಮ್' ಎಂದು ಹೇಳಿದ್ದ. ವೇದವತಿ ಅಪ್ಪನ ಆತ್ಮಚರಿತ್ರೆಯನ್ನು ಓದಲು ಗುರುರಾಜನಿಗೆ ಕೊಡುವ ಮೊದಲು ನಿರ್ಧರಿಸಿ, ನಂತರ ಬೇಡವೆನ್ನಿಸಿತು. ಬೇಡವೆನ್ನಲು ಕಾರಣವಿತ್ತು. ಅಪ್ಪನ ಆತ್ಮಚರಿತ್ರೆಯ ಕೊನೆಯಲ್ಲಿ ಎರಡು ಪ್ರಸಂಗಗಳು (ತನ್ನದೂ ಸೇರಿ) ಅಪ್ಪನ ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿದ್ದವು. ಅವುಗಳನ್ನು ತಾನೇ ತಿದ್ದುಪಡಿ ಮಾಡಬೇಕು. ತನಗೆ ಪಾಠ ಮಾಡಿ ಮಾತ್ರ ಗೊತ್ತು. ಸಾಹಿತ್ಯಿಕ ಬರವಣಿಗೆಯನ್ನು ಮಾಡಿರಲಿಲ್ಲ. ಸಾಹಿತ್ಯದ ಓದೇ ತೀರಾ ಕಮ್ಮಿಯಿತ್ತು. ತನ್ನದು ಅರ್ಥಶಾಸ್ತ್ರದ ವಿಷಯವಾಗಿತ್ತು. ಗುರುರಾಜನ ಜತೆ ಆಗಾಗ ಚರ್ಚೆ ಮಾಡಿ ಅನಿವಾರ್ಯವಾಗಿ ಕೊನೆಗೆ, ಮೊದಲ ಭಾಗಗಳನ್ನು ಓದಿ ನಿಷ್ಠುರತೆ ಇರುವ ಭಾಗಗಳಲ್ಲಿ ಭಾಷಾ ಪರಿಷ್ಕರಣೆ ಮಾಡಲು ಸೂಚಿಸಿದಳು.

3

ವೇದವತಿ ಗುರುರಾಜನಿಗಾಗಿ ಅಂದು ಕಾಯುತ್ತಿದ್ದಳು. ಆದಿವಾರ ಕೂಡಿಕೊಂಡು ಚರ್ಚೆ ಮಾಡಲು ನಿರ್ಧರಿಸಿದ್ದರಿಂದ ಮುಂಜಾನೆಯೇ ಆತನಿಗಾಗಿ ದಾರಿ ನೋಡುತ್ತಿದ್ದಳು. ಅಪ್ಪನ ಆತ್ಮಚರಿತ್ರೆಯನ್ನು ಓದಿ, ತಿದ್ದುಪಡಿ ಮಾಡಬೇಕೆಂದು ಅನ್ನಿಸಿದ್ದೇ ಸಂಕಟವನ್ನು ಅನುಭವಿಸತೊಡಗಿದ್ದಳು. ಐದು ತಿಂಗಳಿಂದ ನಿತ್ಯ ಓದುವುದು, ಇದು ಇರಬಾರದಿತ್ತು! ಇಷ್ಟು ನಿಷ್ಠುರತೆ ಯಾಕಬೇಕಿತ್ತು? ಇದನ್ನು ನಿವೃತ್ತಿಯಾದ ಮೇಲೆ ಬರೆದರೋ, ನಿವೃತ್ತಿಗಿಂತ ಮೂರು ನಾಲ್ಕು ವರ್ಷಗಳ ಹಿಂದಿನಿಂದಲೇ ಆರಂಭಿಸಿದ್ದರೋ? ಸಾವು ಬರುವ ಒಂದು ವರ್ಷದ ಹಿಂದೆಯೇ ಮೌನಿಯಾಗಿದ್ದರಲ್ಲ. ಆ ಅವಧಿಯಲ್ಲಿ ಬರೆದರೋ? ಮೌನವಾಗಿದ್ದ ಅವಧಿಯಲ್ಲಿ ಬರೆದಿದ್ದರೆ ಅಪ್ಪನಲ್ಲಿ ಸಿಡುಕುತನ, ಅರಾಜಕತೆ ಕಮ್ಮಿಯಾಗಿತ್ತು. ಮೃದು ಧೋರಣೆ ತಳೆಯಬೇಕಾಗಿತ್ತು...

ಬೆಲ್ ಆಯಿತು. ವೇದವತಿ ಎದ್ದು ಹೋಗಿ ಬಾಗಿಲನ್ನು ತೆರೆದಳು. ಗುರುರಾಜ ನಿಂತಿದ್ದ. ಒಳಗೆ ಬಂದರು. 'ಅಪ್ಪನ ಆತ್ಮಚರಿತ್ರೆ ಹೇಗನ್ನಿಸುತ್ತಿದೆ, ಗುರುರಾಜ?' ವೇದವತಿ ಕೇಳಿದಳು.

'ರೋಚಕವಾಗಿದೆ ಮೇಡಮ್, ನಾನು ಎರಡು ವರ್ಷ ಶಾಂತಲಿಂಗಪ್ಪರ ಕಾಲೇಜಿನಲ್ಲಿಯೇ ಓದಿದ್ದು. ಅವರು ಸಿಡುಕಿನವರು ಅಂಬೋದು, ಎಲ್ಲರೂ ಅವರಿಗೆ ಅಂಜುತ್ತಿದ್ದರು ಮತ್ತು ಗೌರವ ಕೊಡುತ್ತಿದ್ದರು ಅಂಬೋದು ನೋಡಿದ್ದೆ. ನನ್ನ ಅವರ ಒಡನಾಟ